

ಬಾರಿ ರಿಪೀಟ್ ಆಗಿದ್ದರೂ ಅದರ ಮಾಧುರ್ಯಕ್ಕೆ ಕೊರತೆಯಾಗದಂತೆ ಆಸ್ವಾದಿಸಿದ್ದ ಇದೇ ಹಿರಿಯರು ನಲವತ್ತಕ್ಕೂ ಹೆಚ್ಚು ಬಾರಿ ಅಲ್ಲಾಡಿಸುವ 'ಅಲ್ಲಾಡ್ಸು...' ಗೀತೆಗೆ ಇರುಸುಮುರುಸಾಗಿದ್ದರು. ಕ್ರಮೇಣ ವಿಜಯಪ್ರಕಾಶ್ ಧ್ವನಿ, ಹಾಡಿನ ರಿದಮ್ ಆ ಹಿರಿಯರ ಗಾಂಭೀರ್ಯವನ್ನೂ ಅಲ್ಲಾಡಿಸಿದ್ದು ಸುಳ್ಳಲ್ಲ. ಏಕಾಂತದಲ್ಲಿದ್ದಾಗ, ತಮ್ಮ ಕೈಕಾಲು, ಬೆರಳುಗಳನ್ನು ರಿದಮಿಕ್ ಆಗಿ ಅಲ್ಲಾಡಿಸುತ್ತಾ ತಮ್ಮದೇ ಆರೋಪಕ್ಕೆ ಬಿ ರಿಪೋರ್ಟ್ ಸಲ್ಲಿಸಿದರು. 'ಕಾಲಾಯ ತಸ್ಮೈ ನಮಃ!'

ಕನ್ನಡದ ಅಲ್ಲಾಡಿಸು–ಅಲ್ಲಾಡು ಪದ ಆಂಗ್ಲ ಭಾಷೆಯಲ್ಲಿ 'ಶೇಕ್'. ಅದೇ ನಾಮಪದವೂ ಹೌದು, ಕ್ರಿಯಾಪದವೂ ಹೌದು. ಈ ಶೇಕಿಂಗ್ ಸಂಸ್ಕೃತಿ ಬಹುಶಃ ಆಂಗ್ಲ ಗೀತೆಗಳ ಬಳುವಳಿ. ನಮ್ಮ ಹಳೆಯ ಕನ್ನಡ ಚಿತ್ರಗೀತೆಗಳನ್ನು ಆಲಿಸುವಾಗ ಅವುಗಳ ಮಾಧುರ್ಯಕ್ಕೆ ಮನದುಂಬಿ ತಲೆದೂಗುವಂತಾಗುವುದು. ನರಗಳನ್ನು ಬಿಗಿಯಾಗಿ ಸೆಟೆದುಕೊಂಡು ಶೇಕ್ ಮಾಡುವ ಸಂಸ್ಕೃತಿ ಪ್ರಾರಂಭವಾದದ್ದು ಇಂಗ್ಲಿಷ್ ಗೀತೆಗಳಿಂದ.

ಶೇಕ್ಸ್‌ಪಿಯರ್ ಯುಗದಲ್ಲಿ ಇಂಗ್ಲಿಷ್ ಸಾಹಿತ್ಯಲೋಕ ಸಂಪದ್ಭರಿತವಾದಂತೆ ನಮ್ಮ ಕನ್ನಡದ ಸಿನಿ ಸಾಹಿತ್ಯ ಲೋಕವನ್ನು ಶೇಕ್ ಮಾಡಲು ಹಲವರ ಉಗಮವಾಯಿತು. ಇದಕ್ಕೆ ಮೊದಲು 'ಟೂ ಥೌಸೆಂಡ್ ಎ ಡಿ ಲೇಡಿ'ಯನ್ನು ಶೇಕಿಸಿ ಅಲ್ಟ್ರಾ ಮಾಡರ್ನ್ ಮಾಡಿದ ನಂತರ ಅಲ್ಲಾಡಿಸುವ ಚಾರ್ಜನ್ನು ಹಲವು ಕಂಪೋಸರ್‌ಗಳು ಕೈಗೆತ್ತಿಕೊಂಡರು.

ಸಾರ್ವಜನಿಕ ವೇದಿಕೆಗಳಲ್ಲಿ ಹೊಸ ಭಾಷಣಕಾರರು ಯಾವ ಹಾಡಿನ ಹಂಗೂ ಇಲ್ಲದೆ ಪ್ರೇಕ್ಷಕರನ್ನು ಕಂಡು ತಬ್ಬಿಬ್ಬಾಗಿ ಶೇಕ್ ಆಗುವುದಿದೆ. ಅಂತಹವರ ಮಾನ ಕಾಪಾಡಲೆಂದೇ ಬಹುಶಃ ಈ ಪೋಡಿಯಮ್ ಎಂಬ ಡೆಸ್ಕಿನ ಉದಯವಾಗಿರಬಹುದು. ಶೇಕ್ ಆಗುವ ಕೈಕಾಲುಗಳನ್ನು ಮರೆಮಾಚಲು ಇದೊಂದು ಶೇಕ್‌ಪ್ರೂಫ್ ಕವಚದಂತೆ ಕವರ್ ಆಗಿಬಿಡುವುದು. ಕೆಲವು ಸಮಾರಂಭಗಳಲ್ಲಿ ಪ್ರೇಕ್ಷಕರನ್ನು ಹಿಡಿದಿಡಲು, ರಂಜಿಸಲು ಆಗಾಗ ಒಂದೊಂದು ಜನಪ್ರಿಯ ಗೀತೆಯನ್ನು ಹರಿಯಬಿಡುವ ರೂಢಿಯಿದೆ. ಅಂತಹ ಗೀತೆಗಳಲ್ಲಿ ಶೇಕಿಂಗ್ ಸಾಂಗುಗಳೇ ಹೆಚ್ಚು.



ಇತ್ತೀಚೆಗೆ 'ಕ್ರಾಂತಿ' ಚಿತ್ರದ 'ಲೇಲಾಂಡು ಗಾಡಿ ಹತ್ತಿ... ಬಂತೊಂದು ಕಲಾಕೃತಿ... ಶೇಕ್ ಇಟ್ ಪುಷ್ಪವತಿ...!' ಗೀತೆ ಎಲ್ಲೆಡೆ ದೂಳೆಬ್ಬಿಸುತ್ತಿದೆ. ಈ ಗೀತೆಯ ಸಾಹಿತ್ಯ, ಭಾಷೆ ಅರ್ಥವಾಗದಿದ್ದರೂ ಕುಳಿತವರೂ ಕೈ ಕಾಲಾಡಿಸುವಂತೆ ಮಾಡುವುದಂತೂ ಸುಳ್ಳಲ್ಲ. ಇದರೊಂದಿಗೆ 'ಡಿಪರೆ ಡಿಪಕು... ಡಿಪರೆ ಡಿಪಕು...., ರಪ್ಪರೆ ಬಪ್ಪ... ರಪ್ಪರೆ ಬಪ್ಪ...' ಎಂಬ ತಾಳಮೇಳಗಳು ಎಲ್ಲಾ ವಯೋಮಾನದವರನ್ನೂ ಬಡಿದೆಬ್ಬಿಸುತ್ತವೆ. ಇಂದು ಯಾವ ಸಂಗೀತ, ನೃತ್ಯ, ಮನರಂಜನೆಯ ಕಾರ್ಯಕ್ರಮಗಳೂ ಇಂತಹ ಹಿಮ್ಮೇಳವಿಲ್ಲದೆ, ಪುಷ್ಪವತಿಯ ಶೇಕ್ ಇಲ್ಲದೆ ಸಂಪನ್ನವಾಗುತ್ತಿಲ್ಲ.

ಹಾರ್ಲಿಕ್ಸ್ ಬಾಟಲಿಯಲ್ಲಿ ಕ್ರೋಢೀಕರಿಸಿದ ಕೆನೆಯನ್ನು ಶೇಕ್ ಮಾಡಿಯಷ್ಟೇ ಗೊತ್ತಿದ್ದ, ಮಿಲ್ಕ್ ಶೇಕ್, ಫ್ರೂಟ್ ಶೇಕುಗಳ ಸಂಸ್ಕೃತಿಗೆ ಇತ್ತೀಚೆಗಷ್ಟೇ ತೆರೆದುಕೊಳ್ಳುತ್ತಿದ್ದ... ಮುಜುಗರವೇ ಮೈವೆತ್ತಿದಂತಹ ಮಂದಿಯ ಸೊಂಟವನ್ನೂ ಇಂದು ಮೈಚಳಿ ಬಿಡಿಸಿ ಮಜ್ಜಿಗೆ ಕಡೆದಂತೆ ಕಡೆಸುವಲ್ಲಿ ಭಟ್ಟರ 'ಶೇಕ್ ಇಟ್ ಪುಷ್ಪವತಿ...' ಗೆದ್ದಿದೆ.

ಹಿಂದೆ ಪುಷ್ಪವತಿಯರಾದ ಹೆಣ್ಣುಮಕ್ಕಳು ಹಿರಿಯರ ಮುಂದೆ ನಿಂತು ಕಿವಿಯ ಲೋಲಾಕುಗಳನ್ನು ಶೇಕ್ ಮಾಡಲೂ ಅಂಜುತ್ತಿದ್ದರು. ಆದರಿಂದು ಕೂಸುಗಳ ನರ್ಸರಿ ರೈಮ್ಸ್ ಪ್ರಾರಂಭವಾಗುವುದೇ 'ಶೇಕ್ ಶೇಕ್... ಶೇಕ್ ಯುವರ್ ಬಾಡಿ... ಇಟ್ ಈಸ್ ಪಾರ್ಟಿ ಟೈಮ್...' ಎಂದು.

ಪುರಾಣ ಕಾಲದಿಂದಲೂ ಈ ಶೇಕಿಂಗ್ ಕೌಶಲವನ್ನು ಮನರಂಜನೆಯ ಜೊತೆಗೆ ಶತ್ರುಗಳನ್ನು ನಿಗ್ರಹಿಸಲೂ ಬಳಸಿಕೊಳ್ಳಲಾಗುತ್ತಿತ್ತು. ರಂಭೆ, ಊರ್ವಶಿ, ಮೇನಕೆಯರ ಶೇಕುಗಳಿಗೆ ಋಷಿಮುನಿಗಳ ಅಚಲ ನಿಲುವುಗಳೇ ಅಲ್ಲಾಡಿಹೋದ ಇತಿಹಾಸವಿದೆ.

ತೆರೆಯ ಮೇಲೆ ಲೂಸಿ, ಮೇರಿ, ನ್ಯಾನಿಗಳಷ್ಟೇ ಪಾಲ್ಗೊಳ್ಳುತ್ತಿದ್ದ ಶೇಕಿಂಗ್ ನೃತ್ಯಗಳಿಗೆ ಪುರಾಣದ ಪಾತ್ರಗಳನ್ನೂ ಕರೆತಂದ ಹೆಗ್ಗಳಿಕೆ ಯೋಗರಾಜ ಭಟ್ಟರದು. 'ನಿನ್ನ ಮುಂದೆ ಯಾರೂ ಇಲ್ಲ, ಎಲ್ಲಾ ನಿಂದೆ ನಂದೇನಿಲ್ಲ... ಶಕುಂತಲಾ... ಶೇಕ್ ಯುವರ್ ಬಾಡಿ ಇನ್ನೊಂದ್ಸಲ... ಒನ್ಸು ಮೋರು ಪ್ಲೀಸ್...' ಎನ್ನುತ್ತಾ ಪುಷ್ಪವತಿಯೊಂದಿಗೆ ಶಕುಂತಲೆಯನ್ನೂ ಶೇಕಿಸಿ ಅವರು ತ್ರಿವಿಕ್ರಮರಾದರು. ಹೀಗೆ ರಾರಾ ಎನ್ನುತ್ತಾ ರಕ್ಕಮ್ಮ ರುಕ್ಕಮ್ಮರೊಡನೆ ತೊಂದರೆ ಇಲ್ಲವೆಂದು ಹೇಳುತ್ತಾ ಪಂಕಜ ಪದ್ಮಜರೂ ಸೇರ್ಪಡೆಯಾದರು.

'ಆಡಿಸಿ ನೋಡು ಬೀಳಿಸಿ ನೋಡು... ಉರುಳಿ ಹೋಗದು...ಏನೇ ಬರಲಿ ಯಾರಿಗು ಸೋತು ತಲೆಯ ಬಾಗದು...' ಎನ್ನುತ್ತಾ 'ಕಸ್ತೂರಿ ನಿವಾಸ'ದಲ್ಲಿ ಶೇಕ್ ಆದರೂ ತಲೆಯ ಬಾಗದೆ ಉರುಳಿ ಬೀಳದೆ ಒಂದೇ ಆಕ್ಸಿಸ್‌ನಲ್ಲಿ ಸುತ್ತುವ ವಸ್ತುವಿನ ರೂಪಕ ಹಲವರಿಗೆ ಜೀವನಪಾಠವಾಯಿತು.

ವಸುಧೆ ಮುನಿದು ಒಡಲನ್ನು ಕೊಡವಿದಾಗ ಭೂಮಂಡಲವೇ ಅಲ್ಲಾಡಿ ಅಲ್ಲೋಲ ಕಲ್ಲೋಲ ಆಗುವುದಿದೆ. ಇಂತಹುದೇ ಕಂಪನಗಳು ಹಲವು ಬಾರಿ ಕಿಚನ್‌ನಲ್ಲಿಯೂ ಸಂಭವಿಸಿ ಪಾತ್ರೆ ಪಡಗಗಳು ಶೇಕಾಗಿ ಮೇಲಿನಿಂದ ಉರುಳಿ ಬೀಳುವಾಗ ಪೆಚ್ಚಾಗುವ ಮೇಲ್‌ಗಳು ಹೊರಗೆ ಶೇ(ಶಾ)ಕ್ ಆಗಿ ಪರಿಹಾರ ತಿಳಿಯದೆ ಪರದಾಡುವುದಿದೆ. ಕಿಚನ್ನಿನ ಈ ಅದುರುವಿಕೆಯನ್ನು ರೆಕಾರ್ಡ್ ಮಾಡಲು ರಿಕ್ಟರ್ ಮಾಪಕದ ನೀಡಲ್‌ಗಳೂ ಅಸಹಾಯಕವಾಗಿ ಬಿಡುವವು.



'ಬಿಗ್‌ಬಾಸ್'ನ ವೇಕ್ ಅಪ್ ಸಾಂಗ್‌ಗೆ ಕವುಚಿ ಮಲಗಿದವರೆಲ್ಲಾ ಥಟ್ಟನೆದ್ದು ಬ್ಲಾಂಕೆಟ್ ಪಕ್ಕಕ್ಕೆಸೆದು ಅರೆಬರೆ ಕಣ್ಣು ಬಿಡುತ್ತಾ ಕೈಕಾಲು ಶೇಕಿಸುತ್ತಲೇ ಪ್ರಾರಂಭ ಮಾಡುವ ದಿನಚರಿ ಹಲವರಿಗೆ ಮಾದರಿ! ಹೀಗೆ ದಿನದ ಆರಂಭ ಅಂತ್ಯಗಳೆರಡೂ ಶೇಕಿನೊಂದಿಗೇ ಸಂಪನ್ನಗೊಳ್ಳುತ್ತಿವೆ.

ನವಜಾತ ಶಿಶುಗಳ ತಲೆ ಶೇಕಾಗುವಂತೆಯೇ ಪ್ರಾಯ ಸರಿದವರ ದೇಹವೂ ಕಂಟ್ರೋಲಿಗೆ ಸಿಗದೆ ಅದುರುವುದು. ಈ ನಡುವಿನ ವಯೋಮಾನದವರ ಅಂಗಗಳೆಲ್ಲಾ ಫಾರ್ಮ್‌ನಲ್ಲಿದ್ದರೂ ಶೇಕಿಂಗ್ ಸಂಸ್ಕೃತಿಗೆ ಮಾರುಹೋಗಿ ಸ್ವಯಂ ಶೇಕಾರೂಢರಾಗುವರು. ಹೀಗೆ 'ಬರುವಾಗ ಶೇಕು... ಹೋಗುವಾಗ ಶೇಕು, ಬಂದು ಹೋಗುವ ನಡುವೆ ಬರೀ ಶೇ(ಬೇ)ಕು ಶೇ(ಬೇ)ಕು'.

ಈ ಶೇಕು, ಬೇಕುಗಳು ಮೊದಲು ಶೋಕಿಯಾಗಿ ನಂತರ ವ್ಯಸನವಾಗಿ ಶೋಕಕ್ಕೀಡು ಮಾಡದಿದ್ದರೆ ಒಳಿತು.

ಪ್ರತಿಕ್ರಿಯಿಸಿ: feedback@sudha.co.in